# ಎಕ್ವಿನಾಸನ ದೃಷ್ಟಿಯಲ್ಲಿ ಜ್ಞಾನ

ಸ್ವಾಮಿ ರಾಮಾನುಜಾನಂದ

*ಕ್ರೈಸ್ತಧರ್ಮದ ಪ್ರಸಿದ್ಧ ದೇವತಾಶಾಸ್ತ್ರಜ್ಞ ಥೋಮಸ್ ಎಕ್ವಿನಾಸ್‌ನ ತಾತ್ತ್ವಿಕ ಚಿಂತನೆಗಳ ಒಂದು ತುಲನಾತ್ಮಕ ಅಧ್ಯಯನ ಈ ಲೇಖನದ ವಸ್ತು. ಸ್ವಾಮಿ ರಾಮಾನುಜಾನಂದಜಿಯವರು ಕೇರಳದ ತಿರುವಲ್ಲ ರಾಮಕೃಷ್ಣ ಆಶ್ರಮದಲ್ಲಿ ಸೇವೆ ಸಲ್ಲಿಸುತ್ತಿರುವರು.*

ಮನುಷ್ಯನು ಇತರ ಪ್ರಾಣಿಗಳಿಗಿಂತ ಭಿನ್ನ ಯಾಕೆ? ಮನುಷ್ಯನಿಗೆ ವಿಚಾರ ಮಾಡುವ ಶಕ್ತಿ ಇದೆ. ಬೇರೆ ಪ್ರಾಣಿಗಳಿಗೆ ಆ ಶಕ್ತಿಯಿಲ್ಲ. ಬೇರೆ ಪ್ರಾಣಿಗಳಿಗೆ ಹೆದರಿಕೆ, ಹಸಿವು ಇತ್ಯಾದಿಗಳ ತಿಳುವಳಿಕೆಯಿದೆ. ಆದರೆ ಆ ಪ್ರಾಣಿಗಳು ತಮ್ಮ ಅಸ್ತಿತ್ವವನ್ನು ಕುರಿತು ವಿಚಾರ ಮಾಡಲಾರವು. ಮನುಷ್ಯನು ತನ್ನ ಅಸ್ತಿತ್ವವನ್ನು ಕುರಿತು—ಹಾಗೆಯೇ ಜಗತ್ತಿನ ಹುಟ್ಟು, ಸಾವುಗಳನ್ನು ಕುರಿತು—ವಿಚಾರಮಾಡುತ್ತಾನೆ. ಆದುದರಿಂದಲೇ ಮನುಷ್ಯನಿಗೆ ಹುಲಿ, ಸಿಂಹಗಳಂತಹ ಕ್ರೂರಮೃಗಗಳನ್ನೂ ತನ್ನ ಅಂಕಿತದಲ್ಲಿ ಇಡುವ ಶಕ್ತಿ ದೊರಕಿದೆ.

ಮನುಷ್ಯನ ಮನಸ್ಸಿಗೆ ಮೂರುವಿಧದ ಶಕ್ತಿಗಳಿವೆ—ಇಚ್ಛಾಶಕ್ತಿ (willing), ಸಂವೇದನಾ ಶಕ್ತಿ(feeling) ಮತ್ತು ಜ್ಞಾನಶಕ್ತಿ(knowing). ಈ ಜ್ಞಾನಶಕ್ತಿಯೇ ಮನುಷ್ಯನ ಶ್ರೇಷ್ಠತೆಯ ಕಾರಣವಾಗಿರುವಾಗ, ಜ್ಞಾನವೆಂದರೆ ಏನು ಎಂದು ತಿಳಿಯುವ ಕುತೂಹಲವಾಗುವುದು ಸಹಜ.

ಈ ಜ್ಞಾನವೆಂದರೆ ಏನು? ಇದರ ವಿಚಾರವಾಗಿ ಜಗತ್ತಿನ ಆದಿಯಿಂದ ಋಷಿಗಳು, ದಾರ್ಶನಿಕರು, ತತ್ತ್ವಜ್ಞಾನಿಗಳು, ಕವಿಗಳು, ಹಾಗೂ ಪಂಡಿತರು ತಮ್ಮ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ಇಂದಿನವರೆಗೂ ಜ್ಞಾನದ ಸ್ವರೂಪವನ್ನು ಕುರಿತು ನೂರಾರು ಅಭಿಪ್ರಾಯಗಳಿವೆ ಎಂದು ಹೇಳಿದರೆ ಏನೂ ಅತಿಶಯೋಕ್ತಿಯಾಗಲಾರದು. ಇಷ್ಟು ಅಭಿಪ್ರಾಯಗಳನ್ನು ತಿಳಿದುಕೊಳ್ಳುವುದು ಯಾರಿಂದಲೂ ಸಾಧ್ಯವಿಲ್ಲ. ಆದರೂ ಕೆಲವು ಪ್ರಮುಖ ದಾರ್ಶನಿಕರ ಅಭಿಪ್ರಾಯಗಳನ್ನು ನಾವು ತಿಳಿಯಲೇಬೇಕು.

ಪಾಶ್ಚಾತ್ಯ ದಾರ್ಶನಿಕರಲ್ಲಿ ಥಾಮಸ್ ಎಕ್ವಿನಾಸ್ (Thomas Aquinas)ನ ಸ್ಥಾನ ಬಹಳ ದೊಡ್ಡದು. ಆತ ೧೨೨೪ ಅಥವಾ ೧೨೨೫ನೇ ಇಸವಿಯಲ್ಲಿ ಜನ್ಮ ತಾಳಿದ. ತನ್ನ ಬಾಲ್ಯಕಾಲದಲ್ಲಿಯೇ ಅವನು ಧರ್ಮಗುರುಗಳ ಆಶ್ರಯದಲ್ಲಿ ಬೆಳೆದ ಹಾಗೂ ವಿದ್ಯಾಭ್ಯಾಸದ ಪರಿಸಮಾಪ್ತಿಯಲ್ಲಿ ತಾನೇ ಒಬ್ಬ ಆಚಾರ್ಯನ ಸ್ಥಾನವನ್ನು ಪಡೆದ, ಹಾಗೂ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಮತ್ತು ಧರ್ಮಸಂಸ್ಥೆಗಳಲ್ಲಿ ಅಧ್ಯಾಪನವೃತ್ತಿ ನಡೆಸಿದ. ತನ್ನ ೪೯ನೇ ವಯಸ್ಸಿನಲ್ಲಿ ತೀರಿಹೋಗುವ ಮುನ್ನ ಹಲವಾರು ತಾತ್ತ್ವಿಕ ಗ್ರಂಥಗಳನ್ನು ರಚಿಸಿದ್ದ.

ಎಕ್ವಿನಾಸನು ಜ್ಞಾನದ ವಿಚಾರವಾಗಿ ತನ್ನ ಅಭಿಪ್ರಾಯಗಳನ್ನು ತಿಳಿಸಿದ್ದಾನೆ. ನಾವು ವಸ್ತುಗಳನ್ನು ನೋಡಿ ಸ್ಪರ್ಶಿಸಿದಾಗ ನಮಗೆ ಅವುಗಳ ಅರಿವಾಗುವುದು. ಅಂದರೆ ಇಂದ್ರಿಯಗಳು ವಸ್ತುಗಳೊಂದಿಗೆ ಸಂಸ್ಪರ್ಶಕ್ಕೆ ಬಂದರೆ ಅವುಗಳ ಅರಿವಾಗುವುದು. ಆತನ ಅಭಿಪ್ರಾಯದಲ್ಲಿ ಜೀವಾತ್ಮ ಮತ್ತು ಶರೀರ ಇವುಗಳ ಸಂಯುಕ್ತ ಕಾರ್ಯದಿಂದಲೇ ತಿಳುವಳಿಕೆ ಸಾಧ್ಯ. ಅರ್ಥಾತ್ ಬರೇ ಜೀವಾತ್ಮನಿಗಾಗಲಿ, ಬರೇ ಶರೀರಕ್ಕಾಗಲಿ ತಿಳುವಳಿಕೆಯನ್ನು ಪಡೆಯಲು ಸಾಧ್ಯವಿಲ್ಲ. ಇಲ್ಲಿ ನಾವು ನೆನಪಿನಲ್ಲಿಟ್ಟುಕೊಳ್ಳಬೇಕು —ದೇಹಾತ್ಮವಾದಿಗಳು ಶರೀರವೇ ಆತ್ಮವಾದುದರಿಂದ ಇಂದ್ರಿಯಗಳಿಗೆ ಸಂಪೂರ್ಣ ಜ್ಞಾನವನ್ನು ಪಡೆಯುವ ಶಕ್ತಿಯಿದೆಯೆಂದು ವಾದಿಸುತ್ತಾರೆ; ಇನ್ನು ಆದರ್ಶವಾದಿಗಳು ಜೀವಾತ್ಮನು ಜ್ಞಾನಸ್ವರೂಪನಾದುದರಿಂದ ಅವನಿಗೆ ಜ್ಞಾನವನ್ನು ಪಡೆಯಲು ಇಂದ್ರಿಯಗಳ ಆವಶ್ಯಕತೆಯೇನೂ ಇಲ್ಲವೆಂದು ವಾದಿಸುತ್ತಾರೆ. ಆದರೆ ಎಕ್ವಿನಾಸನು ಜೀವಾತ್ಮ ಮತ್ತು ಶರೀರದ ಸಂಯುಕ್ತ ಕಾರ್ಯಕ್ರಮದಿಂದ ಜಗತ್ತಿನ ಜ್ಞಾನವು ಲಭ್ಯವೆಂದು ಅಭಿಪ್ರಾಯಪಡುತ್ತಾನೆ.

ಜಗತ್ತು ಜಡ, ಜೀವಾತ್ಮನು ಚೈತನ್ಯ. ಜಡವಸ್ತುವಿಗೆ ಚೈತನ್ಯದ ಮೇಲೆ ಪ್ರಭಾವಬೀರುವ ಶಕ್ತಿಯಿಲ್ಲ. ಹಾಗಿರುವಾಗ, ಹೇಗೆ ತಾನೆ ಜಡ ಜಗತ್ತು ತನ್ನ ಅಸ್ತಿತ್ವವನ್ನು ಜೀವಾತ್ಮನಿಗೆ ತಿಳಿಯಪಡಿಸುತ್ತದೆ? ಇದಕ್ಕೆ ಎಕ್ವಿನಾಸನ ಉತ್ತರವೆಂದರೆ ಬುದ್ಧಿ ಜೀವಾತ್ಮನ ಶಕ್ತಿ. ಆ ಬುದ್ಧಿ ಜಾಗೃತವಾದಾಗ, ಜಡವಸ್ತುಗಳ ಇರುವಿಕೆಯನ್ನು ಜೀವಾತ್ಮನಿಗೆ ತಿಳಿಸಿಕೊಡುತ್ತದೆ. ಮನುಷ್ಯನ ಮನಸ್ಸು ಶೂನ್ಯದಲ್ಲಿ ಇರಲಾರದು; ಅದಕ್ಕೆ ಇಂದ್ರಿಯಗಳ ಸಹಾಯ ಬೇಕೇ ಬೇಕು. ಇಂದ್ರಿಯಗಳು ತಮ್ಮ ಅನುಭವಗಳನ್ನು ಮನಸ್ಸಿಗೆ ತಿಳಿಸುತ್ತವೆ. ಅರ್ಥಾತ್, ಕಣ್ಣು ತಾನು ವಸ್ತುಗಳನ್ನು ನೋಡುತ್ತೇನೆಂದು ತಿಳಿಸಿಕೊಡುತ್ತದೆ. ಚರ್ಮ ತಾನು ವಸ್ತುಗಳನ್ನು ಸ್ಪರ್ಶಿಸುತ್ತೇನೆಂದು ತಿಳಿಸಿಕೊಡುತ್ತದೆ. ನಾಲಗೆ ರುಚಿಯನ್ನು ಅನುಭವಿಸುತ್ತೇನೆಂದು ತಿಳಿಸಿಕೊಡುತ್ತದೆ. ಆದುದರಿಂದಲೇ ಮನಸ್ಸಿಗೆ ಬಾಹ್ಯಜಗತ್ತಿನ ಜ್ಞಾನ ಉಂಟಾಗುತ್ತದೆ. ಮನಸ್ಸು ಇಂದ್ರಿಯಗಳ ಅಭಾವದಲ್ಲಿ ಬಾಹ್ಯಜಗತ್ತಿನ ಅಸ್ತಿತ್ವವನ್ನು ಅರಿಯಲಾರದು.

ಈಗ ಪ್ರಶ್ನೆಯೆಂದರೆ, ಜ್ಞಾನವೆಂದರೆ ಬರಿಯ ಜಗತ್ತಿನ ಜ್ಞಾನಮಾತ್ರವಲ್ಲ, ಆಧ್ಯಾತ್ಮಿಕ ಜ್ಞಾನವೂ ಸಹ. ಆ ಆಧ್ಯಾತ್ಮಿಕ ಜ್ಞಾನವನ್ನು ಮನಸ್ಸು ಹೇಗೆ ಪಡೆಯುತ್ತದೆ? ದೇವರು ಇಂದ್ರಿಯಗೋಚರವಲ್ಲ, ವಾಙ್ಮನಸಾಮ-ಗೋಚರಮ್. ಅಂತಹ ದೇವರ ಜ್ಞಾನವನ್ನು ಮನಸ್ಸು ಹೇಗೆ ಪಡೆಯುತ್ತದೆ? ಬುದ್ಧಿಯು ಚೈತನ್ಯದ (ಜೀವಾತ್ಮನ) ಶಕ್ತಿ. ಆ ಬುದ್ಧಿ ಶರೀರದಲ್ಲಿರುವಾಗ ಇಂದ್ರಿಯ ಜನ್ಯ ಜ್ಞಾನವನ್ನು ಪ್ರಕಾಶಪಡಿಸುತ್ತದೆ. ಹಾಗೆಯೇ ಬುದ್ಧಿ ಜೀವಾತ್ಮನನ್ನು ಅವಲಂಬಿಸಿದಾಗ, ಆಧ್ಯಾತ್ಮಿಕ ಜ್ಞಾನವನ್ನು ಪ್ರಕಾಶಿಸಲು ಸಮರ್ಥವಾಗುತ್ತದೆ. ಅಲ್ಲದೆ, ಬಾಹ್ಯ ಜಗತ್ತು ದೇವರ ಸೃಷ್ಟಿಯಾದುದರಿಂದ, ಬಾಹ್ಯಜಗತ್ತಿನ ಅನುಭವದೊಂದಿಗೆ, ದೇವರ ಅರ್ಥಾತ್ ಜಗತ್ತಿನ ನಿಯಾಮಕನ, ಸರ್ವಶಕ್ತಿ, ಸರ್ವಜ್ಞತೆಯ ಆಭಾಸವು ಬುದ್ಧಿಗೆ ಉಂಟಾಗುತ್ತದೆ. ಆದರೆ ಈ ಜ್ಞಾನವು ದೇವರ ಸ್ವರೂಪವನ್ನು ತಿಳಿಸಲಾರದು. ಇದೊಂದು ಆಭಾಸಮಾತ್ರ.

ಇಲ್ಲಿ ದಾರ್ಶನಿಕರು ಎದುರಿಸಬೇಕಾದ ಸಮಸ್ಯೆಯೆಂದರೆ, ಮನುಷ್ಯನ ಮನಸ್ಸು ದೇವರನ್ನು, ದೇವರ ಅಸ್ತಿತ್ವವನ್ನು ಹೇಗೆ ಗ್ರಹಿಸಲು ಸಾಧ್ಯ? ದೇವರನ್ನು ಕುರಿತ ಜ್ಞಾನವು ವೈಯಕ್ತಿಕ ಜ್ಞಾನದ ಪ್ರತಿಬಿಂಬವೆ? ಎಕ್ವಿನಾಸನು ಓರ್ವ ದಾರ್ಶನಿಕನಾಗಿದ್ದರೂ, ಆತನು ಕ್ರೈಸ್ತಧರ್ಮಗುರುವಾಗಿದ್ದನು ಎಂಬುದನ್ನು ನಾವು ಮರೆಯಬಾರದು. ಅವನ ಅಂಬೋಣವೆಂದರೆ, ಜಗತ್ತಿನ ವ್ಯಾಪಾರಗಳನ್ನು ತಿಳಿಸಲು ಇಂದ್ರಿಯಜನ್ಯಜ್ಞಾನವು ಸಹಾಯಕ. ಆದರೆ, ಪರಮಾತ್ಮನ ಜ್ಞಾನವು ಬೇರೆ ಯಾರ ಸಹಾಯವೂ ಇಲ್ಲದೆ, ಬುದ್ಧಿಯ ಮೇಲೆ ತನ್ನ ಪ್ರಭಾವವನ್ನು ಬೀರಬಹುದು.

ತತ್ತ್ವಶಾಸ್ತ್ರ (philosophy) ಮತ್ತು ದೇವತಾಶಾಸ್ತ್ರ (theology) ಇವುಗಳು ಬೇರೆ ಬೇರೆ ಎಂದು ಎಕ್ವಿನಾಸನು ಸೂಚಿಸುತ್ತಾನೆ. ತಾನು ಧರ್ಮಗುರುವಾಗಿದ್ದರೂ ಸ್ವತಂತ್ರ ತತ್ತ್ವಶಾಸ್ತ್ರವನ್ನು ಅಂಗೀಕರಿಸಿದ ಕೀರ್ತಿ ಅವನಿಗೆ ಬಂದಿದೆ. ಆದರೆ, ಅವನ ಅಭಿಪ್ರಾಯದ ಪ್ರಕಾರ ತತ್ತ್ವಶಾಸ್ತ್ರಕ್ಕೆ ಧರ್ಮಶಾಸ್ತ್ರವನ್ನು ನಿರಾಕರಿಸುವ ಅಧಿಕಾರವಿಲ್ಲ. ತತ್ತ್ವಶಾಸ್ತ್ರವು ಧರ್ಮಶಾಸ್ತ್ರಕ್ಕೆ ಪೂರಕವಾಗಿರಬೇಕು. ಅವನ ಪ್ರಕಾರ ಮನುಷ್ಯನ ಮನಸ್ಸು ದೇವರ ಅಸ್ತಿತ್ವವನ್ನು ತಿಳಿಯಬಹುದು, ಆದರೆ ದೇವರ ಸ್ವರೂಪವನ್ನು ಆ ಮನಸ್ಸು ತಿಳಿಯಲಾರದು. ದೇವರ ಅರಿವಾಗಬೇಕಾದರೆ, ದೈವೀ ಸಂಪತ್ತುಗಳನ್ನು ಪಡೆಯಬೇಕು, ಅರ್ಥಾತ್ ದೇವರ ಕೃಪೆಗೆ ಪಾತ್ರನಾದರೆ, ಮನುಷ್ಯನಿಗೆ ಆ ಶಕ್ತಿ ಬರಬಹುದು.

ದೇವರು ಒಬ್ಬ ವ್ಯಕ್ತಿಯೆ ಅಥವಾ ಒಂದು ಶಕ್ತಿಯೆ? ಎಕ್ವಿನಾಸನು ಈ ಪ್ರಶ್ನೆಗೆ ಉತ್ತರ ಕೊಡುತ್ತಾ ಅನ್ನುತ್ತಾನೆ—ದೇವರು ಒಬ್ಬ ವ್ಯಕ್ತಿ. ಯಾಕೆಂದರೆ ನಾವು ಪ್ರಾರ್ಥಿಸಿದಾಗ, ನಮ್ಮ ಪ್ರಾರ್ಥನೆಗೆ ಉತ್ತರ ದೊರಕುತ್ತದೆ. ಆದರೆ ದೇವರು ಎಂತಹ ವ್ಯಕ್ತಿ ಎಂದು ತಿಳಿಯಲು ಮನುಷ್ಯನ ಮನಸ್ಸಿಗೆ ತರ್ಕದ ಮೂಲಕ ಸಾಧ್ಯವಾಗಲಾರದು. ಮನಸ್ಸು ಪರಿಮಿತ, ದೇವರು ಅನಂತ. ಅನಂತತೆಯನ್ನು ಅಳೆಯಲು ಚಿಕ್ಕ ಪಾತ್ರೆಯಿಂದ ಸಾಧ್ಯವೆ? ಆದುದರಿಂದ ಮನುಷ್ಯನ ಮನಸ್ಸು ದೇವರ ವಿಚಾರವಾಗಿ ಅನುಮಾನಿಸಬಹುದು, ಆದರೆ ತರ್ಕಶಾಸ್ತ್ರದ ಮೂಲಕ ದೇವರನ್ನು ತಿಳಿಯಲು ಸಾಧ್ಯವಿಲ್ಲ.

ಹೀಗೆ ತನ್ನ ದಾರ್ಶನಿಕ ಸಿದ್ಧಾಂತಗಳನ್ನು ಮಂಡಿಸಿ, ಥೋಮಸ್ ಎಕ್ವಿನಾಸನು ೧೩ನೇ ಶತಮಾನದಲ್ಲಿ ಪ್ರಸಿದ್ಧನಾದನು. ಅವನ ಗ್ರಂಥಗಳನ್ನು ಇಂದೂ ವಿದ್ವಾಂಸರು ಅಧ್ಯಯನ ಮಾಡುತ್ತಾರೆ. ಎಕ್ವಿನಾಸನ ಅಭಿಪ್ರಾಯಗಳನ್ನು ಭಾರತೀಯ ಚಿಂತಕರ ಅಭಿಪ್ರಾಯಗಳೊಡನೆ ತುಲನಾತ್ಮಕವಾಗಿ ನೋಡುವ ಪ್ರಯತ್ನ ಕುತೂಹಲಕಾರಿಯಾದದ್ದು. ಎಕ್ವಿನಾಸನನ್ನು ಶಂಕರಭಗವತ್‌ಪಾದರೊಡನೆ ಹೋಲಿಸುವ ಪ್ರಯತ್ನಗಳೂ ಇವೆ. ಆದರೆ ಯಾವುದೇ ಎರಡು ವ್ಯಕ್ತಿಗಳು ಸಂಪೂರ್ಣವಾಗಿ ಸಮಾನವಾಗಿರಲು ಸಾಧ್ಯವಿಲ್ಲ. ಆದರೂ ನಾವು ಅವರ ವಿಚಾರಗಳಲ್ಲಿ ಏನಾದರೂ ಸಮಾನತೆ ಇದೆಯೆ ಎಂದು ತಿಳಿದುಕೊಳ್ಳಲು ಪ್ರಯತ್ನಿಸೋಣ.

ಒಂದು ಸಮಾನವಾದ ಅಂಶವೆಂದರೆ ಅದ್ವೈತ ವೇದಾಂತವೂ ಎಕ್ವಿನಾಸನ ವಿಚಾರಧಾರೆಯೂ ಜೀವಾತ್ಮನು ಚೈತನ್ಯಸ್ವರೂಪನು ಎಂಬುದನ್ನು ಒಪ್ಪಿಕೊಳ್ಳುತ್ತವೆ. ಅದ್ವೈತ ವೇದಾಂತದ ಅಂಬೋಣವೆಂದರೆ, ಜೀವಾತ್ಮನು ಪರಮಾತ್ಮನ ಪ್ರತಿಬಿಂಬ. ಪರಮಚೈತನ್ಯದ ಪ್ರತಿಬಿಂಬವು ಮಾಯೆಯಲ್ಲಿ ಪ್ರತಿಫಲಿಸಿ ಜೀವಾತ್ಮನೆಂದು ಕರೆಯಲ್ಪಡುತ್ತದೆ. ಓರ್ವ ಲೇಖಕನು ಹೇಳಿದಂತೆ, ಶರೀರವೆಂಬ ರಾಜ್ಯಕ್ಕೆ ಜೀವಾತ್ಮನೇ ಮಹಾರಾಜ, ಅಹಂಕಾರವು ಯುವರಾಜ. ಬುದ್ಧಿಯು ಪ್ರಧಾನ ಮಂತ್ರಿ, ಮನಸ್ಸು ಗೃಹಮಂತ್ರಿ, ಚಿತ್ತವು ಹಣಕಾಸಿನ ಮಂತ್ರಿ, ಇಂದ್ರಿಯಗಳು ಸರಕಾರೀ ಅಧಿಕಾರಿಗಳು. ಹೀಗೆ ಶರೀರವೆಂಬ ರಾಜ್ಯವು ನಡೆಸಲ್ಪಡುತ್ತಿದೆ. ಇರಲಿ. ಅದ್ವೈತ ವೇದಾಂತವು ಹೇಳುತ್ತದೆ—ಮನಸ್ಸು ಇಂದ್ರಿಯಗಳ ಮೂಲಕ ಹೊರಗೆ ಹೋಗಿ ಬಾಹ್ಯವಸ್ತುಗಳ ಆಕಾರವನ್ನು ತಾಳಿದಾಗ ಜೀವಾತ್ಮನಿಗೆ ಬಾಹ್ಯಜಗತ್ತಿನ ಅರಿವಾಗುವುದು. ಉದಾಹರಣೆಗೆ, ಮನಸ್ಸು ಕಣ್ಣಿನ ಮೂಲಕ ಹೊರಗೆ ಹೋಗುತ್ತದೆ, ಹಾಗೂ ಹತ್ತಿರವೇ ಇರುವ ಗಿಡದ ಆಕಾರವನ್ನು ತಾಳುತ್ತದೆ, ಮತ್ತು ಆ ಗಿಡದ ಚಿತ್ರವನ್ನು ಜೀವಾತ್ಮನಿಗೆ ತಿಳಿಸಿಕೊಡುತ್ತದೆ. ಆಗ ಜೀವಾತ್ಮನು ಅಲ್ಲಿ ಗಿಡ ಇದೆ ಎಂದು, ಮತ್ತು ಆ ಗಿಡದ ಆಕಾರ ಏನು ಎಂದು ತಿಳಿಯುತ್ತಾನೆ. ಹೀಗೆಯೇ ಮನಸ್ಸು ಕಿವಿಯ ಮೂಲಕ ಶಬ್ದವನ್ನೂ ನಾಲಗೆಯ ಮೂಲಕ ರಸವನ್ನೂ ತಿಳಿದು, ಜೀವಾತ್ಮನಿಗೆ ತಿಳಿಸಿಕೊಡುತ್ತದೆ. ಅವಿದ್ಯೆಯು ಶರೀರ, ಮನಸ್ಸು, ಬುದ್ಧಿಗಳ ಮೇಲೆ ಅಸ್ತಿತ್ವ, ತಿಳಿಯುವ ಶಕ್ತಿ, ಮತ್ತು

ಆನಂದವನ್ನು ಆರೋಪಿಸುತ್ತದೆ, ಹಾಗೆಯೇ ಆತ್ಮನ ಮೇಲೆ ಕ್ರಿಯಾಶಕ್ತಿ, ಸೃಷ್ಟಿ, ಸ್ಥಿತಿ, ಲಯಗಳನ್ನು ಆರೋಪಿಸುತ್ತದೆ. ಇವಕ್ಕೆ ಅಧ್ಯಾರೋಪ ಎನ್ನುತ್ತಾರೆ.

ಈಗ ಎಕ್ವಿನಾಸನ ವಿಚಾರಧಾರೆ ಏನು ಎಂದು ನೋಡೋಣ. ಜೀವಾತ್ಮವು ಶರೀರದೊಡನೆ ಸೇರಿಕೊಂಡಾಗ ಬಾಹ್ಯಜಗತ್ತಿನ ಅರಿವಾಗುವುದು ಮಾತ್ರವಲ್ಲದೆ, ವಿಚಾರ ಮಾಡುವ ಶಕ್ತಿಯೂ ಆತನಿಗೆ ಲಭ್ಯವಾಗುವುದು. ಮರಣ ಬಂದಾಗ ಜೀವಾತ್ಮನಿಗೆ ಈ ಅರಿವುಗಳನ್ನು ಪಡೆಯುವ ಸಾಧನವಿಲ್ಲ. ಜೀವಾತ್ಮನು ಶರೀರದ ಆಕಾರವುಳ್ಳವನು. ಎಕ್ವಿನಾಸನ ಅಭಿಪ್ರಾಯವೆಂದರೆ, ಜೀವಾತ್ಮನಿಗೆ ವಿವಿಧ ಶಕ್ತಿಗಳಿವೆ. ಹಸಿವೆ, ಬಾಯಾರಿಕೆಗಳು ಜೀವಾತ್ಮನ ಶಕ್ತಿಗಳು. ಹಾಗೆಯೇ ನೆನಪು ಜೀವಾತ್ಮನ ಮತ್ತೊಂದು ಶಕ್ತಿ. ಹೀಗೆ ಜೀವಾತ್ಮನು ಶರೀರದಲ್ಲಿರುವಾಗ, ತನ್ನ ಶಕ್ತಿಗಳನ್ನು ಕಾರ್ಯಕ್ರಮಕ್ಕೆ ತಂದು ಮನುಷ್ಯನ ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಅಸ್ತಿತ್ವಕ್ಕೆ ಕಾರಣನಾಗುತ್ತಾನೆ. ಎಕ್ವಿನಾಸನು ಹೇಳುತ್ತಾನೆ—ದೇವರು ಅನಂತ ಶುಭ (Infinite Good). ಆನಂದವು ದೇವರ ಶಕ್ತಿ. ಆದುದರಿಂದ ದೇವರನ್ನು ಪಡೆದರೆ ಮಾತ್ರ ಅನಂತ ಆನಂದವನ್ನು ಪಡೆಯಬಹುದು. ಆದರೆ, ಮನುಷ್ಯನು ಜಗತ್ತಿನ ವಸ್ತುಗಳಲ್ಲಿ ಆನಂದವಿದೆಯೆಂದು ಭ್ರಮಿಸಿ, ಅವುಗಳನ್ನು ಪಡೆಯಲು ಪ್ರಯತ್ನಿಸುತ್ತಾನೆ.

ಅದ್ವೈತ ವೇದಾಂತ ಹೇಳುತ್ತದೆ—**ಸತ್ಯಂ ಜ್ಞಾನಮನಂತಂ ಬ್ರಹ್ಮ**. ಬ್ರಹ್ಮನ ಸ್ವರೂಪ ಸತ್, ಚಿತ್, ಆನಂದ. ಬ್ರಹ್ಮನ ಶಕ್ತಿ ಮಾಯೆ. ಬ್ರಹ್ಮನು ಮಾಯೆಯೊಂದಿಗೆ ಸೇರಿದಾಗ ಈಶ್ವರನಾಗುತ್ತಾನೆ, ಸೃಷ್ಟಿ, ಸ್ಥಿತಿ, ಲಯಗಳಲ್ಲಿ ತಲ್ಲೀನನಾಗುತ್ತಾನೆ. ಈಶ್ವರನು ಕಲ್ಯಾಣಗುಣಸಂಪನ್ನ—ಬ್ರಹ್ಮ ನಿಷ್ಕ್ರಿಯ, ನಿರ್ಗುಣ, ನಿರಾಕಾರ.

ಥಾಮಸ್ ಎಕ್ವಿನಾಸನು ಇಚ್ಛಾಸ್ವಾತಂತ್ರ್ಯದಲ್ಲಿ ನಂಬಿಕೆಯುಳ್ಳವನಾಗಿದ್ದನು. ಅರ್ಥಾತ್ ಮನುಷ್ಯನಿಗೆ ಬುದ್ಧಿ, ವಿಚಾರಶಕ್ತಿ ಇದೆ. ಆತ ವಿಚಾರ ಮಾಡಿ ತಿಳಿದುಕೊಳ್ಳಬೇಕು—ತನಗೆ ಭಗವಂತನ ದಾರಿಯಲ್ಲಿ ನಡೆದರೆ ಶುಭವೊ ಅಥವಾ ಜಗತ್ತಿನ ಸುಖಕ್ಕಾಗಿ ಶ್ರಮಿಸಿದರೆ ಶ್ರೇಯಸ್ಕರವೊ ಎಂದು. ಈ ನಿಶ್ಚಯಕ್ಕೆ ಬರುವುದು ಮನುಷ್ಯನ ಕೈಯಲ್ಲಿ ಇದೆ ಎಂದು ಎಕ್ವಿನಾಸನ ಅಭಿಪ್ರಾಯ. ವೇದಾಂತವಾದರೊ, ಮನುಷ್ಯನು ಪೂರ್ವಜನ್ಮದ ಕರ್ಮಗಳಿಂದ ಪ್ರಭಾವಿತನಾಗಿರುತ್ತಾನೆ, ಸಂಪೂರ್ಣವಾಗಿ ತನ್ನ ಇಚ್ಛೆಯಂತೆ ಮಾಡಲು ಆತನಿಗೆ ಸಾಧ್ಯವಾಗುವುದಿಲ್ಲವೆಂದು ಸಾರುತ್ತದೆ.

ಎಕ್ವಿನಾಸನ ವಿಶ್ವಾಸ—ಜೀವಾತ್ಮನು ಶರೀರದ ಆಕಾರವುಳ್ಳವನು, ಜೀವಾತ್ಮನನ್ನು ಈಶ್ವರನು ಸೃಷ್ಟಿಸಿದ್ದಾನೆ. ಜೀವಾತ್ಮನು ಚೈತನ್ಯ, ಆದುದರಿಂದ ಅಮರ. ಈಶ್ವರನ ಸೃಷ್ಟಿಯಾದರೂ ಜೀವಾತ್ಮನಿಗೆ ಮರಣವಿಲ್ಲ. ಅದ್ವೈತ ವೇದಾಂತವಾದರೊ ಜೀವಾತ್ಮನು ಚೈತನ್ಯವಾದುದರಿಂದ ಅದಕ್ಕೆ ಯಾವ ಆಕಾರವೂ ಇಲ್ಲವೆಂದು ತಿಳಿಸುತ್ತದೆ. ಅಲ್ಲದೆ ಜೀವಾತ್ಮನಿಗೆ ಯಾವ ಆದಿ ಅಂತ್ಯವೂ ಇಲ್ಲ. ಜೀವಾತ್ಮನು ಪರಮಾತ್ಮನ ಪ್ರತಿಬಿಂಬ. ಹೀಗೆ ಜೀವಾತ್ಮನ ವಿಚಾರವಾಗಿ ಎಕ್ವಿನಾಸನು ಅದ್ವೈತದ ಅಭಿಪ್ರಾಯಕ್ಕನುಗುಣವಾಗಿ ಏನನ್ನೂ ಹೇಳುವುದಿಲ್ಲ. ಅವನು ಹೇಳುವುದೆಂದರೆ ಜೀವಾತ್ಮನು ದೇವರ ಸೃಷ್ಟಿಯಾದರೂ ಚೈತನ್ಯ ಹಾಗೂ ಅಮರ.

ಎಕ್ವಿನಾಸನ ಅಭಿಪ್ರಾಯವೆಂದರೆ, ಜೀವಾತ್ಮನು ಶರೀರದೊಂದಿಗೆ ಸೇರಿದಾಗ ಅವನಿಗೆ ಜ್ಞಾನಪ್ರಾಪ್ತಿ. ಆದುದರಿಂದ ಜೀವಾತ್ಮನಿಗೆ ತನ್ನ ಹಿತಕ್ಕಾಗಿ ಶರೀರದ ಆವಶ್ಯಕತೆ ಇದೆ. ಅದ್ವೈತದ ಪ್ರಕಾರ ಜೀವಾತ್ಮನು ಜ್ಞಾನಸ್ವರೂಪ, ಎಲ್ಲ ಜ್ಞಾನವು ಉಂಟಾಗುವುದು ಆತ್ಮನ ಬೆಳಕಿನಿಂದಲೇ. ಈ ದೇಹೇಂದ್ರಿಯಮನಸ್ಸುಗಳು ಅವನಿಗೆ ಬಂಧನ. ಇವುಗಳಿಂದ ಬಿಡುಗಡೆಯೇ ಮುಕ್ತಿ.

ಎಕ್ವಿನಾಸನ ಅಭಿಪ್ರಾಯದಲ್ಲಿ ದೇವರ ಸ್ವರೂಪ ಯಾವುದು? ಇಲ್ಲಿ ಬರುವ ಒಂದು ಸಮಸ್ಯೆಯೆಂದರೆ ದೇವರನ್ನು ತಿಳಿಯುವುದು ಹೇಗೆ? ಜಗತ್ತಿನ ವಸ್ತುಗಳನ್ನು ಇಂದ್ರಿಯಗಳ ಮೂಲಕ ತಿಳಿಯಬಹುದು. ದೇವರನ್ನು ಗ್ರಹಿಸುವ ಶಕ್ತಿ ಇಂದ್ರಿಯಗಳಿಗೆ ಇಲ್ಲ. ಅದಕ್ಕೆ ಎಕ್ವಿನಾಸನ ಉತ್ತರವೆಂದರೆ ನಾವು ದೇವರನ್ನು ನೇತಿ ಮಾರ್ಗದಿಂದ ತಿಳಿಯಬೇಕು. ಅರ್ಥಾತ್ ದೇವರು ಜಗತ್ತಿನ ವಸ್ತುವಲ್ಲ, ಸಮುದ್ರವಲ್ಲ, ಸೂರ್ಯ, ಚಂದ್ರ, ನಕ್ಷತ್ರಗಳಲ್ಲ, ಹೀಗೆ ಬಾಹ್ಯವಸ್ತುಗಳನ್ನು ನಿರಾಕರಿಸಿದಾಗ ಉಳಿಯುವ ತತ್ತ್ವವೇ ದೇವರು. ಬ್ರಹ್ಮಜ್ಞಾನವನ್ನು ಪಡೆಯುವುದಕ್ಕೆ ಉಪನಿಷತ್ತಿನಲ್ಲಿ ಹೇಳಿರುವ "ನೇತಿ ನೇತಿ" ಮಾರ್ಗವನ್ನು ಇದು ನೆನಪಿಸಿಕೊಡುತ್ತದೆ. ಎಕ್ವಿನಾಸನು ಹೇಳುತ್ತಾನೆ—ದೇವರು ಅನಂತ ಮತ್ತು ಪರಿಪೂರ್ಣ. ವೇದಾಂತವು ಸಹ **ಸತ್ಯಂ ಜ್ಞಾನಮನಂತಂ ಬ್ರಹ್ಮ, ಪ್ರಜ್ಞಾನಂ ಬ್ರಹ್ಮ** ಎನ್ನುತ್ತದೆ.

ಎಕ್ವಿನಾಸನು ಹೇಳುವುದು ಏನೆಂದರೆ ದೇವರು ಶಾಶ್ವತನು ಮಾತ್ರವಲ್ಲ, ದೇವರು ಶಾಶ್ವತತೆ (God is not only eternal, He is Eternity). ಈ ವಿಚಾರದಲ್ಲಿ ವೇದಾಂತದ ಅಭಿಪ್ರಾಯವೂ ಇದೇ ಆಗಿದೆ. ಎಕ್ವಿನಾಸನ—God is Existence(ಸತ್) ಎಂಬ ಮಾತು ವೇದಾಂತದ ಪ್ರತಿಧ್ವನಿಯೊ ಎನ್ನಿಸುತ್ತದೆ.

ಹೀಗೆ ಎಕ್ವಿನಾಸನು ತನ್ನ ದಾರ್ಶನಿಕ ಚಿಂತನೆಗಳಿಂದ ಪಾಶ್ಚಾತ್ಯ ಜಗತ್ತನ್ನು ಆಶ್ಚರ್ಯಚಕಿತವಾಗುವಂತೆ ಮಾಡಿದನು. ಆದರೆ ಭಾರತೀಯ ದಾರ್ಶನಿಕರು ಈ ಎಲ್ಲ ತತ್ತ್ವಗಳನ್ನೂ ಅವನಿಗಿಂತಲೂ ಎಷ್ಟೊ ಶತಮಾನಗಳ ಮೊದಲು ಪ್ರತಿಪಾದಿಸಿದ್ದರು ಎಂಬುದನ್ನು ನಾವು ಮರೆಯಬಾರದು. ✱